# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಡಾ|| ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1395

ಉತ್ತರ ದಿನಾಂಕ : 24-12-2021

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು ತೂಬಗೆರೆ ಹೋಬಳಿ ಮೆಳೇಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಾವ ಯಾವ ಗ್ರಾಮಗಳಿಗೆ ಶುದ್ಧ ಸುರಕ್ಷಿತ ಕುಡಿಯುವ ನೀರು ಒದಗಿಸುವ ಯೋಜನೆ ಅನುಷ್ಠಾನ ಮಾಡಲಾಗಿದೆ; ಇದಕ್ಕೆ ತಗುಲಿರುವ ವೆಚ್ಚ ಎಷ್ಟು; ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದ ಪಾಲೆಷ್ಟು; | ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು ತೂಬಗೆರೆ ಹೋಬಳಿ ಮೆಳೇಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೌಡನ ಕೆರೆಯಿಂದ ದೊಡ್ಡರಾಯಪ್ಪನಹಳ್ಳಿ ಮತ್ತು ಚಿಕ್ಕರಾಯಪ್ಪನಹಳ್ಳಿ ಗ್ರಾಮಗಳಿಗೆ ನೀರನ್ನು ಒದಗಿಸಲು 'ಜಲ ಜೀವನ್ ಮಿಷನ್' ಯೋಜನೆ ಅಡಿ ಬಹುಗ್ರಾಮ ಕುಡಿಯುವ ನೀರು ಯೋಜನೆಯು ಅನುಮೋದನೆಯಾಗಿದ್ದು, ಡಿ.ಪಿ.ಆರ್ ತಯಾರಿಸಲಾಗುತ್ತಿದೆ. ಈವರೆಗೂ ಯಾವುದೇ ವೆಚ್ಚವಾಗಿರುವುದಿಲ್ಲ. |
| ಆ) | ಇದೇ ಮೆಳೇಕೋಟೆ ಪಂಚಾಯ್ತಿ ವ್ಯಾಪ್ತಿಯ ದೊಡ್ಡರಾಯಪ್ಪನಹಳ್ಳಿ, ಚಿಕ್ಕರಾಯಪ್ಪನಹಳ್ಳಿ ಸರ್ವೆ ನಂಬರ್ ಗಳಲ್ಲಿರುವ ಗೌಡನ ಕೆರೆ ಹಾಗೂ "ಕೈಲಾಸಮ್ಮನ ಕೆರೆ" ಅಭಿವೃದ್ಧಿಗಾಗಿ ನಿರ್ದಿಷ್ಟವಾಗಿ ಹಣ ಒದಗಿಸಲಾಗಿದೆಯೇ; | ಮೆಳೇಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೊಡ್ಡರಾಯಪ್ಪನಹಳ್ಳಿ ಚಿಕ್ಕರಾಯಪ್ಪನಹಳ್ಳಿ ಸರ್ವೆ ನಂಬರ್‌ಗಳಲ್ಲಿರುವ ಗೌಡನ ಕೆರೆ ದುರಸ್ಥಿ ಕಾರ್ಯಕ್ಕಾಗಿ 2021-22ನೇ ಸಾಲಿನ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನ ಯೋಜನೆಯಡಿಯಲ್ಲಿ ರೂ.3.00ಲಕ್ಷಗಳ ಅನುದಾನ ಒದಗಿಸಲಾಗಿದೆ. ಕೈಲಾಸಮ್ಮನ ಕೆರೆ ಅಭಿವೃದ್ಧಿಗಾಗಿ ಯಾವುದೇ ಅನುದಾನ ಒದಗಿಸಿಲ್ಲ. |
| ಇ) | ಗೌಡನ ಕೆರೆಯಿಂದ ಬಹುಗ್ರಾಮ ಕುಡಿಯುವ ನೀರು ಪೂರೈಕೆ (MVS) ಯೋಜನೆಗಾಗಿ ಎಷ್ಟು ಹಣ 'ಜಲಜೀವನ್ ಮಿಷನ್' ಯೋಜನೆ ಅಡಿ ಪೂರೈಸಲಾಗಿದೆ; ಎಷ್ಟು ಗ್ರಾಮಗಳ ಎಷ್ಟು ಮನೆಗಳಿಗೆ ಎಷ್ಟು ಪ್ರಮಾಣದ ನೀರು ಪೂರೈಕೆ ಸಾಮರ್ಥ್ಯ-ಸಾಧ್ಯತೆ ಅಂದಾಜಿಸಲಾಗಿದೆ; | ಗೌಡನ ಕೆರೆಯಿಂದ 'ಜಲ ಜೀವನ್ ಮಿಷನ್' ಯೋಜನೆ ಅಡಿ 02 ಗ್ರಾಮಗಳ 331 ಮನೆಗಳಿಗೆ ರೂ.1.98ಕೋಟಿಗಳಲ್ಲಿ 55 LPCD ಯಂತೆ ನೀರು ಪೂರೈಸುವುದಕ್ಕೆ ವಿಸ್ತೃತ ಯೋಜನೆ ವರದಿ ಸಿದ್ಧಪಡಿಸಲಾಗುತ್ತಿದೆ. |
| ಈ) | ಗೌಡನ ಕೆರೆಗೆ (ಚಿಕ್ಕರಾಯಪ್ಪನಹಳ್ಳಿ) ನಿರಂತರ ಅಂತರ್ಜಲ ಪೂರೈಕೆ ವೃದ್ಧಿಸಲು ಈ ಕೆರೆ ಮೇಲ್ಭಾಗದಲ್ಲಿರುವ ಚನ್ನರಾಯಸ್ವಾಮಿ ಬೆಟ್ಟದ ಬುಡದಲ್ಲಿ ಚಿಕ್ಕ ಚೆಕ್ ಡ್ಯಾಂ ಕಟ್ಟುವ ಯೋಜನೆ ಇದೆಯೇ; ಇದರ ಅಂದಾಜು ವೆಚ್ಚವೆಷ್ಟು; (ಚನ್ನಗಿರಿ, ಪಂಚಗಿರಿ ಶ್ರೇಣಿ ನಂದಿಗಿರಿ ಶ್ರೇಣಿಗೆ ಸೇರಿದೆ) | ಗೌಡನ ಕೆರೆ (ಚಿಕ್ಕರಾಯಪ್ಪನಹಳ್ಳಿ) ನಿರಂತರ ಅಂತರ್ಜಲ ಪೂರೈಕೆ ವೃದ್ಧಿಸಲು ಈ ಕೆರೆಯ ಮೇಲ್ಭಾಗದಲ್ಲಿರುವ ಚನ್ನರಾಯಸ್ವಾಮಿ ಬೆಟ್ಟದ ಬುಡದಲ್ಲಿ ಚಿಕ್ಕ CheckDam ಕಟ್ಟುವ ಬಗ್ಗೆ ಸಾಧಕ ಭಾಧಕಗಳನ್ನು ಪರಿಶೀಲಿಸಿ ಕ್ರಮ ವಹಿಸಬೇಕಾಗಿರುತ್ತದೆ, ಈ ಬಗ್ಗೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ ಅಂದಾಜು ವೆಚ್ಚವನ್ನು ನಿಗಧಿಪಡಿಸಬೇಕಾಗಿರುತ್ತದೆ. |

ಸಂ:ಗ್ರಾಕುನೀ&ನೈಇ 335 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು